# ಫ್ಲಿಪ್ ಕಾರ್ಟ್ ನಿಂದ `ಫ್ಲಿಪ್ ಕಾರ್ಟ್ ಕ್ವಿಕ್' ಸೇವೆ ಆರಂಭ

- **ಬೆಂಗಳೂರಿನ ಆಯ್ದ ಭಾಗಗಳಲ್ಲಿ ಈ ಸೇವೆ ಲಭ್ಯ**
- **ಮುಂದಿನ ಕೆಲವು ತಿಂಗಳಲ್ಲಿ ಇನ್ನೂ 6 ನಗರಗಳಿಗೆ ಈ ಸೇವೆ ವಿಸ್ತರಣೆ**
- **ಆರ್ಡರ್ ಮಾಡಿದ 90 ನಿಮಿಷಗಳಲ್ಲಿ ಮನೆ ಬಾಗಿಲಿಗೆ ಉತ್ಪನ್ನಗಳನ್ನು ತಲುಪಿಸುವ ವ್ಯವಸ್ಥೆ**
- **ಕಿರಾಣ ಸ್ಟೋರ್ ಗಳನ್ನು ಇ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ವ್ಯಾಪ್ತಿಗೆ ತರಲು ಈ ಸೇವೆ**

ಬೆಂಗಳೂರು, ಜುಲೈ 28, 2020: ಭಾರತದಲ್ಲಿ ಮುಂಚೂಣಿಯಲ್ಲಿರುವ ದೇಶೀಯ ಇ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್ ತನ್ನ ಗ್ರಾಹಕರಿಗೆ ಮತ್ತಷ್ಟು ಹತ್ತಿರವಾಗಲು ಮತ್ತು ಹೊಸ ಗ್ರಾಹಕರನ್ನು ಆಕರ್ಷಿಸುವ ನಿಟ್ಟಿನಲ್ಲಿ ತನ್ನ ಹೈಪರ್ ಲೋಕಲ್ ಸೇವೆಯಾದ `ಫ್ಲಿಪ್ ಕಾರ್ಟ್ ಕ್ವಿಕ್' ಅನ್ನು ಇಂದು ಆರಂಭಿಸಿದೆ. ತನ್ನ ಸುಧಾರಿತ ತಂತ್ರಜ್ಞಾನ ಸಾಮರ್ಥ್ಯಗಳು ಮತ್ತು ಪೂರೈಕೆ ಜಾಲದ ಮೂಲಸೌಕರ್ಯಗಳನ್ನು ಬಳಸಿಕೊಂಡು ಈ ಸೇವೆಯನ್ನು ಆರಂಭಿಸಿದೆ. ಈ ಫ್ಲಿಪ್ ಕಾರ್ಟ್ ಕ್ವಿಕ್ ನ ಪ್ರಮುಖ ಉದ್ದೇಶವೆಂದರೆ ಗ್ರಾಹಕರಿಗೆ ಸರಿಸಾಟಿ ಇಲ್ಲದ ಶಾಪಿಂಗ್ ಅನುಭವವನ್ನು ನೀಡುವುದು, ವಿಸ್ತಾರವಾದ ಆಯ್ಕೆಗಳೊಂದಿಗೆ ಅತ್ಯುತ್ಕೃಷ್ಠ ದರ್ಜೆಯ ಉತ್ಪನ್ನಗಳನ್ನು ಒದಗಿಸುವುದಾಗಿದೆ. ಈ ಹೈಪರ್ ಲೋಕಲ್ ಡೆಲಿವರಿ ಮಾದರಿಯ ಉದ್ದೇಶ ಉತ್ಪನ್ನಗಳ ಲಭ್ಯತೆಯನ್ನು ವಿಸ್ತರಿಸುವುದು ಮತ್ತು ತಮ್ಮದೇ ಸ್ಥಳದಲ್ಲಿ ಫ್ಲಿಪ್ ಕಾರ್ಟ್ ನ ಹಬ್ ಗಳ ಮೂಲಕ ಉತ್ಪನ್ನಗಳ ಆಯ್ಕೆ ಮತ್ತು ತ್ವರಿತ ಡೆಲಿವರಿಯ ಮೂಲಕ ಹೊಸ ಗ್ರಾಹಕರನ್ನು ಅನ್ವೇಷಣೆ ಮಾಡುವುದಾಗಿದೆ.

ಉತ್ಪನ್ನಗಳ ಲಭ್ಯತೆ ಮತ್ತು ಸುಲಭ ದರ ಸೇರಿದಂತೆ ಫ್ಲಿಪ್ ಕಾರ್ಟ್ ಕ್ವಿಕ್ ದಿನಸಿ, ಫ್ರೆಶ್, ಡೈರಿ, ಮಾಂಸ, ಮೊಬೈಲ್, ಎಲೆಕ್ಟ್ರಾನಿಕ್ಸ್ ಅಕ್ಸೆಸರಿಗಳು, ಸ್ಟೇಷನರಿ ಉತ್ಪನ್ನಗಳು ಮತ್ತು ಹೋಂ ಅಪ್ಲೈಯನ್ಸ್ ನಂತಹ 2000 ಕ್ಕೂ ಅಧಿಕ ಉತ್ಪನ್ನಗಳನ್ನು ವಿತರಣೆ ಮಾಡುವ ಮೂಲಕ ಗ್ರಾಹಕರ ದೈನಂದಿನ ಶಾಪಿಂಗ್ ಅನುಭವವನ್ನು ಆಧುನೀಕರಣಗೊಳಿಸಲಿದೆ. ಮೊದಲ ಹಂತದಲ್ಲಿ ಈ ಎಲ್ಲಾ ಉತ್ಪನ್ನಗಳು ಗ್ರಾಹಕರಿಗೆ ಲಭ್ಯವಿವೆ. ಗ್ರಾಹಕರು ತಮ್ಮ ಅನುಕೂಲಕ್ಕೆ ತಕ್ಕಂತೆ 90 ನಿಮಿಷಗಳ ಆರ್ಡರ್ ಆಯ್ಕೆ ಮಾಡಿಕೊಳ್ಳಬಹುದು ಅಥವಾ 2 ಗಂಟೆಯ ಸ್ಲಾಟ್ ಅನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ದಿನದ ಯಾವುದೇ ವೇಳೆಯಲ್ಲಿ ಗ್ರಾಹಕರು ತಮಗೆ ಬೇಕಾದ ಉತ್ಪನ್ನಗಳಿಗೆ ಆರ್ಡರ್ ಮಾಡಬಹುದು ಮತ್ತು ಬೆಳಗ್ಗೆ 6 ರಿಂದ ಮಧ್ಯರಾತ್ರಿವರೆಗೆ ಆರ್ಡರ್ ಗಳನ್ನು ಡೆಲಿವರಿ ಪಡೆಯಬಹುದಾಗಿದೆ. ಇದಕ್ಕಾಗಿ ಡೆಲಿವರಿ ಶುಲ್ಕ ಕನಿಷ್ಠ 29 ರೂಪಾಯಿಗಳಿಂದ ಆರಂಭವಾಗಲಿದೆ.

ಈ ಹೊಸ ಸೇವೆಯನ್ನು ಆರಂಭದ ಬಗ್ಗೆ ಮಾತನಾಡಿದ ಫ್ಲಿಪ್ ಕಾರ್ಟ್ ನ ಉಪಾಧ್ಯಕ್ಷ ಸಂದೀಪ್ ಕಾರ್ವ ಅವರು, ``ನಿರ್ದಿಷ್ಟ ಪ್ರದೇಶದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಉತ್ಪನ್ನಗಳು ಮತ್ತು ಗ್ರಾಹಕರ ನಡುವೆ ಸುಲಭವಾಗಿ ಸಂಪರ್ಕವನ್ನು ಕಲ್ಪಿಸುವುದು ಹೈಪರ್ ಲೋಕಲ್ ಸಾಮರ್ಥ್ಯವಾಗಿದೆ. ಎಲ್ಲಾ ಬಗೆಯ ಮನೆಗಳು ತಮ್ಮ ನೆರೆಹೊರೆಯ ಕಿರಾಣ ಅಂಗಡಿಗಳಲ್ಲಿ ಉತ್ಪನ್ನಗಳನ್ನು ಖರೀದಿಸುತ್ತಿರುವುದರಿಂದ ಈ ಹೈಪರ್ ಲೋಕಲ್ ಭಾರತಕ್ಕೆ ಒಂದು ಉತ್ತಮ ಮಾದರಿ ಎನಿಸಲಿದೆ. ಭಾರತೀಯ ಕುಟುಂಬಗಳು ಹೈಪರ್ ಲೋಕಲ್ ಸಂದರ್ಭಕ್ಕೆ ಒಗ್ಗಿಕೊಂಡಿವೆ. ವೆಂಡರ್ ಗಳು, ಶಾಪ್ ಕೀಪರ್ ಗಳು ಮತ್ತು ಸೇವಾ ಪೂರೈಕೆದಾರರೊಂದಿಗೆ ಉತ್ಪನ್ನಗಳ ಖರೀದಿಯಲ್ಲಿ ಆಳವಾದ ಸಂಬಂಧವನ್ನು ಹೊಂದಿರುತ್ತಾರೆ. ಇದೀಗ ಇಂತಹ ಗ್ರಾಹಕರು ಇ-ಕಾಮರ್ಸ್ ನ ಅನುಕೂಲಗಳನ್ನು ಬಳಸಿಕೊಳ್ಳಲಿದ್ದಾರೆ. ನಾವು ನಮ್ಮ ಡಾರ್ಕ್ ಸ್ಟೋರ್ ಮಾದರಿಯನ್ನು ಆರಂಭಿಸಿದ್ದು, ಗ್ರಾಹಕರಿಗೆ ಹತ್ತಿರವಿರುವ ಮಾರಾಟಗಾರರನ್ನು ಹೊಂದುತ್ತೇವೆ. ಇಂತಹ ಮಾರಾಟಗಾರರು ಗ್ರಾಹಕರಿಗೆ ಉತ್ಪನ್ನಗಳನ್ನು ತಲುಪಿಸಲಿದ್ದಾರೆ. ಈ ಮಾದರಿಯು ಸ್ಥಳೀಯ ಉದ್ಯಮಶೀಲತ್ವವನ್ನು

ಪ್ರೋತ್ಸಾಹಿಸಲಿದೆ ಮತ್ತು ಹೊಸ ವ್ಯವಹಾರ ಕಾರ್ಯತಂತ್ರಗಳು ಹಾಗೂ ಪಾಲುದಾರಿಕೆಗಳು ಆರಂಭವಾಗಲು ವಿಪುಲ ಅವಕಾಶವನ್ನು ಕಲ್ಪಿಸುತ್ತದೆ. ಇಂದು ನಾವು ಫ್ಲಿಪ್ ಕಾರ್ಟ್ ಕ್ವಿಕ್ ನೊಂದಿಗೆ ಕೇವಲ ಒಂದು ಕ್ಲಿಕ್ ಮೂಲಕ ನೆರೆಹೊರೆಯ ಕಿರಾಣ ಸ್ಟೋರ್ ಗಳನ್ನು ನಮ್ಮ ವೇದಿಕೆಗೆ ಸೇರಿಸುವುದರೊಂದಿಗೆ ಇಡೀ ಜಾಲವನ್ನು ಒಗ್ಗೂಡಿಸಲಿದ್ದೇವೆ" ಎಂದರು.

ವೈಟ್ ಫೀಲ್ಡ್, ಪಣತ್ತೂರು, ಎಚ್ಎಸ್ಆರ್ ಲೇಔಟ್, ಬಿಟಿಎಂ ಲೇಔಟ್, ಬನಶಂಕರಿ, ಕೆಆರ್ ಪುರಂ ಮತ್ತು ಇಂದಿರಾನಗರ ಸೇರಿದಂತೆ ಬೆಂಗಳೂರಿನ ಆಯ್ದ ಸ್ಥಳಗಳಲ್ಲಿ ಫ್ಲಿಪ್ ಕಾರ್ಟ್ ಕ್ವಿಕ್ ಸೇವೆ ಆರಂಭವಾಗಿದೆ.

ಫ್ಲಿಪ್ ಕಾರ್ಟ್ ಕ್ವಿಕ್ ಅಕ್ಷಾಂಶ ಮತ್ತು ರೇಖಾಂಶದ ವಿಧಾನವನ್ನು ಅಳವಡಿಸಕೊಳ್ಳಲಿದೆ. ಇದು ಸ್ಥಳಗಳನ್ನು ಹೆಚ್ಚು ನಿಖರವಾಗಿಸುವುದಲ್ಲದೇ, ಡೆಲಿವರಿ ಸಮಯವನ್ನು ಕಡಿಮೆ ಮಾಡಲಿದೆ. ಸಾಂಪ್ರದಾಯಿಕ ಮಾದರಿಯಾದ ಪಿನ್ ಕೋಡ್ ಪದ್ಧತಿಯನ್ನು ಬಿಟ್ಟು, ಡೆಲಿವರಿ ಅಥವಾ ವಿತರಣೆಯ ಸ್ಥಳವನ್ನು ಗುರುತಿಸಲಾಗುತ್ತದೆ. ಇದು ವಿಸ್ತಾರವಾದ ಪ್ರದೇಶವನ್ನು ಒಳಗೊಂಡಿರುತ್ತದೆ. ಸ್ಥಳದ ಮ್ಯಾಪಿಂಗ್ ಗಾಗಿ ಫ್ಲಿಪ್ ಕಾರ್ಟ್ ಕ್ವಿಕ್ ನಾವೀನ್ಯತೆ ಮತ್ತು ಸುಧಾರಿತ ತಂತ್ರಜ್ಞಾನವನ್ನು ಬಳಸಿಕೊಳ್ಳಲಿದೆ. ಈ ತಂತ್ರಜ್ಞಾನವು ಕಟ್ಟಕಡೆಯ ಸ್ಥಳದ ಪ್ರಕ್ರಿಯೆಯನ್ನು ವೇಗಗೊಳಿಸುವುದಷ್ಟೇ ಅಲ್ಲ, ವಿಳಾಸ ಮ್ಯಾಪಿಂಗ್ ಪದ್ಧತಿಯನ್ನು ಹೆಚ್ಚು ನಿಖರವಾಗಿ ನೀಡಲಿದೆ. ಈ ಮೂಲಕ ತಪ್ಪು ಹೊಂದಾಣಿಕೆಗಳು ಅಥವಾ ಪುನಃ ಪುನಃ ಪ್ರಯತ್ನ ಮಾಡುವುದು ತಪ್ಪುತ್ತದೆ.

ಕಳೆದ ಎರಡು ವರ್ಷಗಳಲ್ಲಿ ಭಾರತದಲ್ಲಿ ಆನ್ ಲೈನ್ ಮತ್ತು ಆಫ್ ಲೈನ್ ರೀಟೇಲ್ ನಲ್ಲಿ ಸಾಕ್ಷಟು ಬದಲಾವಣೆಯಾಗಿದೆ. ಆದರೆ, ಕಳೆದ 50 ದಿನಗಳಲ್ಲಿ ಅದ್ಭುತವಾದ ವೇಗ ಮತ್ತು ಕಾರ್ಯಾಚರಣೆಯ ದಕ್ಷತೆಗಳೊಂದಿಗೆ ವಿನೂತನವಾದ ನಾವೀನ್ಯತೆಗಳು ಮತ್ತು ವ್ಯವಹಾರ ಮಾದರಿಗಳು ಹೊರಹೊಮ್ಮಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಸಾಂಕ್ರಾಮಿಕ ಹರಡಿರುವ ಈ ಸಂದರ್ಭದಲ್ಲಿ ಬಹುತೇಕ ಅರ್ಧ ವರ್ಷ ಕಳೆದಿದ್ದೇವೆ. ಈ ಸಂದರ್ಭದಲ್ಲಿ ಪೂರೈಕೆ ಜಾಲದಲ್ಲಿ ಗಣನೀಯ ಪ್ರಮಾಣದಲ್ಲಿ ರೂಪಾಂತರವನ್ನು ಕಂಡಿದ್ದೇವೆ.

ಹೈಪರ್ ಲೋಕಲ್ ವಿಭಾಗವು ಹಲವರಿಗೆ ಅನುಕೂಲತೆಯನ್ನು ತಂದುಕೊಟ್ಟಿದೆ. ಈ ಮೂಲಕ ಈ ಕ್ಷೇತ್ರವು ದೇಶದ ದೀರ್ಘಾವಧಿಯ ಅಗತ್ಯ ಸೇವೆಯಾಗಿ ಹೊರಹೊಮ್ಮಿದೆ. ಇದು ಗ್ರಾಹಕರ ಮನಸ್ಥಿತಿ ಮತ್ತು ನಿರೀಕ್ಷೆಗಳಲ್ಲಿ ಗಣನೀಯ ಪ್ರಮಾಣದ ಬದಲಾವಣೆಗೆ ದಾರಿ ಮಾಡಿಕೊಡಲಿದೆ. 2020 ನೇ ಸಾಲಿನ ಅಂತ್ಯದ ವೇಳೆಗೆ ಭಾರತದ ಹೈಪರ್ ಲೋಕಲ್ ಮಾರುಕಟ್ಟೆಯ ವಹಿವಾಟು 2306 ಕೋಟಿ ರೂಪಾಯಿಗಳನ್ನು ಮೀರಲಿದೆ ಎಂದು ಸಿಎಜಿಆರ್ ನಿರೀಕ್ಷೆ ಹೊಂದಿದೆ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India's e-commerce revolution, with a registered customer base of over 200 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs has driven us to innovate on many industry firsts. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, and PhonePe, India's fastest growing digital payments platform, the Flipkart Group is steering the transformation of commerce in India through technology.

**For media queries, contact media@flipkart.com.**